2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 154/2019

| | | |
|---|---|---|
| ಸಾಕ್ಷಿದಾರರ ಹೆಸರು | - ಸುನಿಲ್ | ಪಿಡಬ್ಲೂ - 10 |
| ತಂದೆಯ ಹೆಸರು | - ಮಂಜುನಾಥ | ಸಿಡಬ್ಲೂ - 17 |
| ವಯಸ್ಸು | - 39 ವರ್ಷ | |
| ಉದ್ಯೋಗ | - ಸಹಾಯಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ ಶಿವಮೊಗ್ಗ | |
| ವಾಸ ಸ್ಥಳ | - ಶಿವಮೊಗ್ಗ | |

ದಿನಾಂಕಃ **19.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ **:** ಸರ್ಕಾರಿ ಅಭಿಯೋಜಕರಿಂದ**-**

1. ನಾನು ದಿಃ 30.09.2013 ರಿಂದ ದಿಃ 19.07.2021 ರವರೆಗೆ ಸಹಾಯ ಇಂಜಿನಿಯರಾಗಿ ಕೊಪ್ಪದ ಲೊಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 21.06.2019 ರಂದು ನ.ರಾ.ಪುರ ಪೋಲೀಸರು ಮನವಿ ಸಲ್ಲಿಸಿ ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸುವಂತೆ ಮನವಿ ಸಲ್ಲಿಸಿದ್ದರು. ಸದರಿ ಮನವಿಯನ್ನು ನಿಪಿ.16 ಎಂದು ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು.

3. ದಿಃ 26.07.2019 ರಂದು ನ.ರಾ.ಪುರ ಠಾಣಾ ಮುಖ್ಯಪೇದೆ ತಮ್ಮಯ್ಯ ಇವರು ನನ್ನನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿದ ಮೇರೆಗೆ ನಕಾಶೆಯನ್ನು ತಯಾರಿಸಿದ್ದೇನೆ. ಅದನ್ನು ನಿಪಿ.17 ಎಂದು ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ನಿಪಿ.17 ನ್ನು ಕವಚಪತ್ರದೊಂದಿಗೆ ಕಳುಹಿಸಿದ್ದು ಸದರಿ ಕವಚಪತ್ರವನ್ನು

ನಿಪಿ.18 ಎಂದು ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಶ್ರೀ.ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿತರ ಪರವಾಗಿಃ</u>

4. ನಿಪಿ.17 ರಲ್ಲಿ ಕೆಂಪು ಬಣ್ಣದ ಪಕ್ಕದಲ್ಲಿ ತೋರಿಸಿರುವ ಸ್ಥಳ ಒಂದು ಕಟ್ಟಡವಾಗಿದೆ. ಕೆಂಪುಬಣ್ಣದಲ್ಲಿ ತೋರಿಸಿರುವುದು ಕಟ್ಟಡದ ಒಳಗಿನ ಭಾಗವಾಗಿದೆ. ಕಟ್ಟಡದ ಅಕ್ಕಪಕ್ಕದಲ್ಲಿ ಕಾಂಪೌಂಡ್ ಇರಲಿಲ್ಲ. ಅಲ್ಲಿ ಬಸ್ ಸ್ಟ್ಯಾಂಡ್ ಕಂಡು ಬಂದಿರುವುದಿಲ್ಲ.

5. ನಿಪಿ.17 ನ್ನು ತಯಾರಿಸುವ ಮೊದಲು ಯಾವುದೇ ಕಚ್ಚಾ ನಕ್ಷೆ ತಯಾರಿಸಿಕೊಂಡಿಲ್ಲ. ನಿಪಿ.17 ನಕ್ಷೆ ತಯಾರಿಸುವಷ್ಟು ಸಲಕರಣೆ ನನ್ನ ಜೊತೆ ಒಯ್ದಿದ್ದೆ. ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ. ಸಲಕರಣೆಯನ್ನು ನನ್ನ ಜೊತೆ ಒಯ್ದಿರುವ ಬಗ್ಗೆ ನಿಪಿ.17 ರಲ್ಲಿ ನಮೂದಿಸಿರುವುದಿಲ್ಲ.

6. ದಿಃ 26.07.2019 ರಂದು ಸ್ಥಳದಲ್ಲಿ ನಿಪಿ.17 ರ ನಕ್ಷೆ ತಯಾರಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ